# ಚೆಂದವಾಗಿ ಕಾಣೋದಷ್ಟೇ ನನ್ನ ಉದ್ದೇಶವಲ್ಲ



**ನಾಟ್ಯ ಕಲಾವಿದೆಯಾಗಿರುವ ಮಾತಂಗಿ ಪ್ರಸನ್ನ ಆವರಿಗೆ ನಟನೆಯ ಮೇಲೂ ವಿಶೇಷ ಒಲವು. ಆದರೆ ಒಳ್ಳೆಯ ಸಿನಿಮಾ ಮತ್ತು ಸವಾಲೆನಿಸುವ ಪಾತ್ರಗಳ ಮೂಲಕವೇ ಗುರ್ತಿಸಿಕೊಳ್ಳುತ್ತೇನೆ ಎಂದು ನಿಶ್ಚಯ ಮಾಡಿಕೊಂಡಿರುವ ಆವರಿಗೆ ಆ್ಯಕ್ಷನ್ ಸಿನಿಮಾದಲ್ಲಿ ನಟಿಸುವ ಆಸೆಯೂ ಇದೆ.**

■ ಪದ್ಮನಾಭ ಭಟ್

‘ನಾನು ಕ್ಲಾಸಿಕಲ್ ಡಾನ್ಸರ್. ಡಾನ್ಸ್ ಮೂಲಕ ನನ್ನ ಬದುಕಿಗೆ ಸಾಕಾಗುವಷ್ಟು ದುಡಿಯುತ್ತೇನೆ. ಹಾಗಾಗಿ ಸಿನಿಮಾದಲ್ಲಿ ನಟಿಸಿಯೇ ಜೀವನ ನಿರ್ವಹಣೆ ಮಾಡಬೇಕು ಎಂಬ ಅನಿವಾರ್ಯತೆ ಇಲ್ಲ. ಆದ್ದರಿಂದಲೇ ನಾನು ಸಿಕ್ಕ ಅವಕಾಶಗಳನ್ನೆಲ್ಲ ಒಪ್ಪಿಕೊಳ್ಳುತ್ತಿಲ್ಲ. ತುಂಬ ಮುಖ್ಯವೆನಿಸಿದ ಮತ್ತು ಸವಾಲೆನಿಸುವ ಪಾತ್ರಗಳನ್ನು ಮಾತ್ರ ಒಪ್ಪಿಕೊಳ್ಳುತ್ತೇನೆ’ – ಹೀಗೆ ಸ್ಪಷ್ಟವಾಗಿ ತಮ್ಮ ಅಭಿಪ್ರಾಯವನ್ನು ಬಿಚ್ಚಿಟ್ಟರು ಮಾತಂಗಿ ಪ್ರಸನ್ನ.

ಅರವಿಂದ ಶಾಸ್ತ್ರಿ ನಿರ್ದೇಶನದ ‘ಕಹಿ’ ಸಿನಿಮಾದ ಮೂಲಕ ಗಮನಸೆಳೆದ ಅವರ ಕೈತುಂಬ ಅವಕಾಶಗಳ ಗುಚ್ಛವೇನೂ ಇಲ್ಲ. ಇದಕ್ಕೆ ಅವರ ಮೇಲಿನ ನಿಲುವೇ ಕಾರಣ. ನಟಿಸಿದ ಕೆಲವೇ ಸಿನಿಮಾಗಳಲ್ಲಿ ಮನಸಿಗೊಪ್ಪುವ ಪಾತ್ರಗಳನ್ನು ನಿರ್ವಹಿಸಿರುವ ತೃಪ್ತಿ ಅವರಲ್ಲಿದೆ. ‘ನನಗೆ ತೆರೆಯ ಮೇಲೆ ಎಷ್ಟು ಹೊತ್ತು ಕಾಣಿಸಿಕೊಳ್ಳುತ್ತೇನೆ ಎನ್ನುವುದು ಮುಖ್ಯವೇ ಅಲ್ಲ. ಆದರೆ ಕಾಣಿಸಿಕೊಂಡ ಸಮಯದಲ್ಲಿ ಎಂಥ ಪರಿಣಾಮ ಬೀರುತ್ತೇನೆ. ಆ ಪಾತ್ರಕ್ಕೆ ಎಷ್ಟು ಮಹತ್ವ ಇದೆ ಎನ್ನುವುದು ಮುಖ್ಯ’ ಎಂಬುದು ಮಾತಂಗಿ ಅವರ ಸ್ಪಷ್ಟ ನಿಲುವು.

‘ತುಂಬ ಮೋಹಕವಾಗಿ ಕಾಣಿಸುವ, ನಾಯಕನ ಮೆಚ್ಚುಗೆಗಾಗಿ ಹಾತೊರೆಯುವ, ಅವನ ಶೌರ್ಯಪ್ರದರ್ಶನಕ್ಕೆ ಸಾಧನವಾಗಿ ಬಳಕೆಯಾಗುವ ಪಾತ್ರಗಳೆಂದರೆ ನನಗೆ ಅಷ್ಟೊಂದು ಇಷ್ಟವಿಲ್ಲ. ಯಾಕೆಂದರೆ ವಾಸ್ತವ ಬದುಕಿನಲ್ಲಿ ಹಾಗೆಲ್ಲ ಇರುವುದಿಲ್ಲವಲ್ಲ. ಮಹಿಳೆ ಬರೀ ಸೌಂದರ್ಯ ಮತ್ತು ಲೈಂಗಿಕತೆಯನ್ನು ಬಿಂಬಿಸುವ ವಸ್ತು ಅನ್ನುವುದನ್ನು ನಂಬಲು ನನಗೆ ಸಾಧ್ಯವಿಲ್ಲ. ನನಗೆ ಬಂದ ಅನೇಕ ಅವಕಾಶಗಳನ್ನು ಆ ಕಾರಣದಿಂದಲೇ ತಿರಸ್ಕರಿಸಿದ್ದೇನೆ. ಇದರ ನಡುವೆಯೇ ನನಗಿಷ್ಟ ಆಗುವ ಪಾತ್ರಗಳೂ ಬರುತ್ತಿವೆ ಎನ್ನುತ್ತಾರೆ.

ಫೆಬ್ರುವರಿಯಲ್ಲಿ ಅವರು ನಟಿಸಿದ ‘ಹಾಫ್ ಬಾಯಿಲ್ಡ್’ ಚಿತ್ರ ತೆರೆಕಂಡಿದೆ. ಹಾಗೆಯೇ ಅವರಿಂದ ಕುಪ್ಪೀಕರ್ ನಿರ್ದೇಶನದ ‘ಪುಕ್ಸಟ್ಟೆ ಲೈಫು’ ಚಿತ್ರದಲ್ಲಿಯೂ ಅವರು ಮುಖ್ಯಪಾತ್ರವೊಂದರಲ್ಲಿ ನಟಿಸಿದ್ದಾರೆ. ಇದರ ಜೊತೆಗೆ ತೆಲುಗಿಗೂ ಮಾತಂಗಿ ಕಾಲಿಟ್ಟಿದ್ದಾರೆ.

‘ತೆಲುಗಿನ ಒಂದು ಚಿತ್ರದಲ್ಲಿ ನಟಿಸುತ್ತಿದ್ದೇನೆ. ಮುಂದಿನ ವಾರ ಚಿತ್ರೀಕರಣ ಆರಂಭವಾಗುತ್ತದೆ. ಆ ಚಿತ್ರದ ಹೆಸರನ್ನು ಈಗಲೇ ಬಹಿರಂಗಪಡಿಸುವಂತಿಲ್ಲ. ಆದರೆ ಒಂದು ಒಳ್ಳೆಯ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದೇನೆ ಎಂದು ಮಾತ್ರ ಹೇಳಬಲ್ಲೆ’ ಎಂದು ವಿವರಿಸುತ್ತಾರೆ ಅವರು. ಈ ಚಿತ್ರದಲ್ಲಿ ಅವರು ನಾಟ್ಯ ಕಲಾವಿದೆಯಾಗಿಯೇ ಕಾಣಿಸಿಕೊಳ್ಳುತ್ತಿದ್ದಾರೆ.

‘ಪುಕ್ಸಟ್ಟೆ ಲೈಫು’ ಚಿತ್ರದ ಪಾತ್ರದ ಕುರಿತು ಮಾತಂಗಿಗೆ ಹೆಚ್ಚಿನ ನಿರೀಕ್ಷೆ ಇದೆ. ‘ಸಾಮಾನ್ಯವಾಗಿ ನಮ್ಮ ಸಿನಿಮಾಗಳಲ್ಲಿ ಮಧ್ಯಮ ಮತ್ತು ಶ್ರೀಮಂತ ವರ್ಗದವರ ಬದುಕನ್ನೇ ತೋರಿಸುತ್ತೇವೆ. ಆದರೆ ಈ ಚಿತ್ರ ಕೆಳವರ್ಗದವರ ಬದುಕನ್ನು ಬಿಂಬಿಸುವ ಚಿತ್ರ. ಒಂದು ಕೊಳೆಗೇರಿಯಂಥ ಪ್ರದೇಶದಲ್ಲಿ ಚಿತ್ರ ನಡೆಯುತ್ತದೆ. ನನ್ನದು ನ್ಯಾಯವಾದಿಯ ಪಾತ್ರ. ಯಾವುದಕ್ಕೂ ಹೆದರದ ಹೆಣ್ಣುಮಗಳು. ಸಂಚಾರಿ ವಿಜಯ್ ನನ್ನ ನೆರೆಮನೆಯ ವ್ಯಕ್ತಿ ಆಗಿರುತ್ತಾರೆ. ಒಂದು ಘಟನೆ ಎಲ್ಲರ ಬದುಕನ್ನು ಹೇಗೆ ಕಲಕುತ್ತದೆ ಎನ್ನುವುದು ಕಥೆಯ ವಸ್ತು’ ಎಂದು ವಿವರಿಸುತ್ತಾರೆ.

‘ಕನ್ನಡ ನನ್ನ ಮನೆ. ಕನ್ನಡ ಮಾತಾಡುವಾಗ ನಾನು ಎಲ್ಲೇ ಇದ್ದರೂ ಮನೆಯಲ್ಲಿದ್ದೇನೆ ಎನ್ನುವ ಭಾವ ಉಂಟಾಗುತ್ತದೆ. ಹಾಗಾಗಿ ಕನ್ನಡದಲ್ಲಿಯೇ ನಟಿಸಬೇಕು ಎನ್ನುವುದು ನನ್ನ ಇಷ್ಟ. ಆದರೆ ಇನ್ನಷ್ಟು ಒಳ್ಳೆಯ ಅವಕಾಶಕ್ಕಾಗಿ ಕಾಯುತ್ತಿದ್ದೇನೆ’ ಎನ್ನುವ ಮಾತಂಗಿಗೆ ಒಂದು ಆ್ಯಕ್ಷನ್ ಸಿನಿಮಾದಲ್ಲಿ ನಟಿಸುವ ಆಕಾಂಕ್ಷೆಯೂ ಇದೆ.

‘ನಾನು ನಾಟ್ಯ ಕಲಾವಿದೆ. ಹಾಗೆಯೇ ಮಾರ್ಷಲ್ ಆರ್ಟ್ ತರಬೇತಿಯನ್ನೂ ಪಡೆದಿದ್ದೇನೆ. ಹಾಗಾಗಿ ಆ ವಿದ್ಯೆಯನ್ನು ಬಳಸಿಕೊಳ್ಳಬಲ್ಲಂಥ ಒಂದು ಆ್ಯಕ್ಷನ್ ಸಿನಿಮಾಗಾಗಿ ಕಾಯುತ್ತಿದ್ದೇನೆ’ ಎಂದು ತಮ್ಮ ನಿರೀಕ್ಷೆಯನ್ನು ಹೊರಹಾಕುತ್ತಾರೆ ಮಾತಂಗಿ. ■